13

PAPER CLIPPINGS

DEPARTMENT / ...: ಕರ್ನಾಟಕ ವಿಧಾನ ಪರಿಷತ್ ಸಚಿವಾಲಯ

NAME OF THE NEWS PAPER: ವಿಶ್ವವಾಣಿ DATE: 07/03/2020

## ಸಮಾಚಾರ ಸಣ್ಣದಲ್ಲಿ

# ಪರಿಷತ್‌ನಲ್ಲಿ ಮಂತ್ರಿಭಾಗ್ಯದ ಚರ್ಚೆ

ವಿಧಾನಪರಿಷತ್: ಮಂತ್ರಿ ಭಾಗ್ಯದ ವಿಷಯ ವಿಧಾನ ಪರಿಷತ್‌ನಲ್ಲಿ ಪ್ರಸ್ತಾಪಗೊಂಡು ಬಿಜೆಪಿ, ಜೆಡಿಎಸ್ ಸದಸ್ಯರು ಪರಸ್ಪರ ಕಾಲೆಳೆದುಕೊಂಡ ಘಟನೆ ನಡೆಯಿತು. ಬೆಂಗಳೂರಿಗೆ ಒಬ್ಬ ಉಸ್ತುವಾರಿ ಮಂತ್ರಿ ನೇಮಕ ಮಾಡುವಂತೆ ಕಾಂಗ್ರೆಸ್‌ನ ಯು.ಬಿ. ವೆಂಕಟೇಶರಿಂದ ಸರಕಾರಕ್ಕೆ ಆಗ್ರಹಿಸಿದರು. ಒಬ್ಬ ಉಸ್ತುವಾರಿ ಸಚಿವರಿಲ್ಲದೇ ಬೆಂಗಳೂರಿಗೆ ಅಭಿವೃದ್ಧಿಯಾಗುತ್ತಿಲ್ಲ. ಕೆಲ ಜಿಲ್ಲೆಗಳಿಗೆ ಜಿಲ್ಲಾ ಸಚಿವರನ್ನು ನೇಮಕ ಮಾಡಿಲ್ಲ. ಈ ಸರಕಾರ ಇದ್ಯಾ ಇಲ್ವೋ ಗೊತ್ತಿಲ್ಲ ಹೀಗೆ ಆದರೆ ಸರಕಾರಕ್ಕೆ ಜಾಸ್ತಿ ಆಯಸ್ಸು ಇರೋದಿಲ್ಲ ಎಂದು ಲೇವಡಿ ಮಾಡಿದರು. ರಾಜ್ಯಪಾಲರಿಂದ ಬಿಜೆಪಿಯವರು ಸುಳ್ಳು ಭಾಷಣದಲ್ಲಿ ಮಾಡಿಸಿದ್ದಾರೆ. ನಮ್ಮ ಸರಕಾರದ ಯೋಜನೆಗಳನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದ್ದಾರೆ. ಈ ಸರಕಾರ ಏನು ಮಾಡ್ತಿಲ್ಲ ಎಂದು ಸದನದಲ್ಲಿ ಸರಕಾರದ ವಿರುದ್ಧ ವೆಂಕಟೇಶ್ ಕಿಡಿಕಾರಿದರು. ಈ ವೇಳೆ ಪದೇ ಪದೇ ಮಧ್ಯಪ್ರವೇಶಿಸುತ್ತಿದ್ದ ಬಿಜೆಪಿ ಸದಸ್ಯ ನಾರಾಯಣಸ್ವಾಮಿಗೆ ವೆಂಕಟೇಶ್ ತರಾಟೆಗೆ ತೆಗೆದುಕೊಂಡರು. ಈ ವೇಳೆ ಜೆಡಿಎಸ್ ಸದಸ್ಯ ಬೋಜೆಗೌಡ ಬಿಜೆಪಿ ನಾರಾಯಣಸ್ವಾಮಿ ಅವರ ಕಾಲೆಳೆದರು. ಎಷ್ಟೇ ಮಾತಾಡಿದರೂ ಮಂತ್ರಿಯಾಗಲ್ಲ,ನಿಮ್ಮ ಟ್ಯಾಲೆಂಟ್ ಎಲ್ಲಿ ತೋರಿಸಬೇಕೊ ಅಲ್ಲಿ ತೋರಿಸಿ. ಇಲ್ಲಿ ಎಷ್ಟೇ ಮಾತಾಡಿದರೂ ಯಾವುದೇ ಉಪಯೋಗ ಇಲ್ಲ ಎಂದರು. ಬೋಜೆಗೌಡರಿಗೆ ತಿರುಗೇಟು ನೀಡಿದ ನಾರಾಯಣಸ್ವಾಮಿ, ಎಚ್.ಡಿ ಕುಮಾರಸ್ವಾಮಿ ಅವರ ಕೈ ನಿಮ್ಮ ಹೆಗಲ ಮೇಲಿದ್ದರೂ ನೀವು ಮಂತ್ರಿಯಾಗಲಿಲ್ಲ ಬಿಡಿ ಎಂದು ಲೇವಡಿ ಮಾಡಿದರು.